# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 184 | Pages. 2 | Date: 01-07-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 184 - ಪುಟಗಳು : 2 | 01-07-2026 ಬುಧವಾರ | Ph: 8762954248 | ದರ : ₹1


# ಅಂತಾರಾಷ್ಟ್ರೀಯ ಕಲಾವಿದ ಕೆ.ಟಿ.ಶಿವಪ್ರಸಾದ್ ನಿಧನ



**ಒಟ್ಟಾರೆಯಾಗಿ, ಕೆ.ಟಿ. ಶಿವಪ್ರಸಾದ್ ಅವರು ಕಲೆ ಎಂಬುದು ಬರೀ ಕಣ್ಣಿಗೆ ಕಾಣುವ ಸೌಂದರ್ಯವಲ್ಲ, ಅದು ಭಾಷೆ ಮತ್ತು ಗಡಿಗಳನ್ನು ಮೀರಿದ ಒಂದು ಆಳವಾದ ಅಭಿವ್ಯಕ್ತಿ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಹೆಮ್ಮೆಯ ಕನ್ನಡಿಗ. ಹಾಸನದ ಮಣ್ಣಿನಿಂದ ಎದ್ದುಬಂದು ವಿಶ್ವ ಕಲಾ ಭೂಪಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಇವರ ಸಾಧನೆ ಅನನ್ಯವಾದದ್ದು.**

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಂತಾರಾಷ್ಟ್ರೀಯ ಚಿತ್ರ ಕಲಾವಿದ ಹಾಗೂ ಪ್ರಗತಿಪರ ಹೋರಾಟಗಾರ ಕೆ.ಟಿ. ಶಿವಪ್ರಸಾದ್ (77) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ನಾಡಿನ ಖ್ಯಾತ ಹಾಗೂ ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದರಾದ , ನನ್ನ ಚಳುವಳಿಯ ಗುರುಗಳೂ ಆಗಿರುವ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತ ಕೆ.ಟಿ. ಶಿವಪ್ರಸಾದ್ ( 77 ) ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.

ಕಿಡ್ನಿ ಸಮಸ್ಯೆಯಿಂದ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಇತ್ತೀಚೆಗೆ ದೀರ್ಘ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಖ್ಯಾತ ಉದ್ಯಮಿ ದಿವಂಗತ ಕಾರ್ಲೆ ಅವರ ಮಗನಾಗಿದ್ದ ಶಿವಪ್ರಸಾದ್ ಅವರು ತೇಜಸ್ವಿ ಅವರ ಪರಮಾಪ್ತರಾಗಿದ್ದರು.

## ಕಾರ್ಲೆ ಎಂಬ ಹಳ್ಳಿಯಿಂದ ಅಂತಾರಾಷ್ಟ್ರೀಯ ಖ್ಯಾತಿಯವರೆಗೆ

ಕೆ. ಟಿ. ಶಿವಪ್ರಸಾದ್ ಅವರು ಕರ್ನಾಟಕದ ಹೆಸರಾಂತ ಅಂತರರಾಷ್ಟ್ರೀಯ ಕಲಾವಿದರು ಮತ್ತು ಸಮಾಜ ಸೇವಕರು. 1947ರಲ್ಲಿ ಕೊಡಗಿನಲ್ಲಿ ಜನಿಸಿದ ಇವರು, ಎಂಜಿನಿಯರಿಂಗ್ ಶಿಕ್ಷಣವನ್ನು ಮೊಟಕುಗೊಳಿಸಿ ಮುಂಬೈನ ಪ್ರತಿಷ್ಠಿತ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ ನಿಂದ 1973ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದರು. ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ.ಅವರ ಕಲಾಜೀವನ ಹಾಗೂ ಸಾಧನೆಗಳ ಪ್ರಮುಖ ಮುಖ್ಯಾಂಶಗಳು:ಚಿತ್ರಕಲಾ ಶೈಲಿ: ಇವರ ಕಲಾಕೃತಿಗಳಲ್ಲಿ ಗ್ರಾಮೀಣ ಭಾರತದ ನೈಜತೆ, 20ನೇ ಶತಮಾನದ ಪಾಪ್ ಆರ್ಟ್ ಮತ್ತು ಭಾವನಾತ್ಮಕ ಅಭಿವ್ಯಕ್ತಿಗಳನ್ನು ಕಾಣಬಹುದು. ಇವರ ರೇಖಾಚಿತ್ರಗಳು ಮತ್ತು ವರ್ಣಚಿತ್ರಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿವೆ.ಪ್ರದರ್ಶನಗಳು: ಮುಂಬೈನ ಜಹಾಂಗೀರ್ ಆರ್ಟ್ ಗ್ಯಾಲರಿ, ಚೆನ್ನೈ ಮತ್ತು ಬೆಂಗಳೂರಿನ ಸಾಕ್ಷಿ ಗ್ಯಾಲರಿ ಹಾಗೂ ಭೋಪಾಲ್‌ನಂತಹ ಪ್ರತಿಷ್ಠಿತ ಸ್ಥಳಗಳಲ್ಲಿ ಇವರ ಸೋಲೋ ಮತ್ತು ಗ್ರೂಪ್ ಪ್ರದರ್ಶನಗಳು ನಡೆದಿವೆ.ಸಾಮಾಜಿಕ ಕಳಕಳಿ: ಕಲೆಯ ಜೊತೆಗೆ, ಕರ್ನಾಟಕದ ರೈತರು ಮತ್ತು ದಲಿತರ ಸಬಲೀಕರಣಕ್ಕಾಗಿ ನಡೆದ ಸಂಘಟನೆಗಳಲ್ಲಿ ಹಾಗೂ ಸಮಾಜಪರ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.ಇತರ ಆಸಕ್ತಿಗಳು: ಚಿತ್ರಕಲೆಯಷ್ಟೇ ಅಲ್ಲದೆ, ಉತ್ತಮ ಛಾಯಾಗ್ರಾಹಕರಾಗಿ ಮತ್ತು ವಾಸ್ತುಶಿಲ್ಪ ಸಲಹೆಗಾರರಾಗಿ ಗುರುತಿಸಿಕೊಂಡಿದ್ದಾರೆ.

ಹಾಸನ ಜಿಲ್ಲೆಯ ಮಣ್ಣಿನಿಂದ ರೂಪುಗೊಂಡು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕುಂಚದ ಮೂಲಕ ಛಾಪು ಮೂಡಿಸಿದ ಪ್ರಮುಖ ಚಿತ್ರಕಲಾವಿದರಲ್ಲಿ ಕೆ.ಟಿ. ಶಿವಪ್ರಸಾದ್ ಅವರ ಹೆಸರು ಮುಂಚೂಣಿಯಲ್ಲಿ ನಿಲ್ಲುತ್ತದೆ. ಕೇವಲ ಕ್ಯಾನ್ವಾಸ್ ಮೇಲೆ ಬಣ್ಣ ಬಳಿಯುವುದಕ್ಕಷ್ಟೇ ಸೀಮಿತವಾಗದೆ, ಕಲೆಯ ಮೂಲಕ ಜೀವನ ದರ್ಶನವನ್ನು ಕಟ್ಟಿಕೊಟ್ಟ ಅಪರೂಪದ ಕಲಾವಿದ ಇವರು.

## ಹಿನ್ನೆಲೆ ಮತ್ತು ಶಿಕ್ಷಣ

ಹಾಸನದಲ್ಲಿ ಜನಿಸಿ ಬೆಳೆದ ಶಿವಪ್ರಸಾದ್ ಅವರಿಗೆ ಬಾಲ್ಯದಿಂದಲೇ ಚಿತ್ರಕಲೆಯತ್ತ ತೀವ್ರವಾದ ಒಲವಿತ್ತು. ತಮ್ಮ ಕಲಾಭ್ಯಾಸವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅವರು ಬೆಂಗಳೂರಿನ ಪ್ರತಿಷ್ಠಿತ ಕೆನ್ ಸ್ಕೂಲ್ ಆಫ್ ಆರ್ಟ್ ಸೇರಿದರು. ಅಲ್ಲಿ ಪ್ರಸಿದ್ಧ ಕಲಾವಿದ ಆರ್. ಎಂ. ಹಡಪದ್ ಅವರ ಗರಡಿಯಲ್ಲಿ ಪಳಗಿದ ಅವರು, ಚಿತ್ರಕಲೆಯ ತಾಂತ್ರಿಕತೆ ಮತ್ತು ದಾರ್ಶನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡರು. ನಂತರದ ದಿನಗಳಲ್ಲಿ ತಮ್ಮ ಉನ್ನತ ವ್ಯಾಸಂಗ ಹಾಗೂ ಕಲಾ ವಿಸ್ತರಣೆಗಾಗಿ ಲಂಡನ್ ಸೇರಿದಂತೆ ವಿದೇಶಗಳಿಗೂ ಪಯಣಿಸಿದರು.

## ಕಲಾ ಶೈಲಿ ಮತ್ತು ವಿಶಿಷ್ಟತೆ

ಕೆ.ಟಿ. ಶಿವಪ್ರಸಾದ್ ಅವರ ಕಲಾಕೃತಿಗಳು ಕೇವಲ ದೃಶ್ಯಗಳಲ್ಲ, ಅವು ಆಳವಾದ ಸಂವೇದನೆಗಳ ಪ್ರತಿರೂಪ. ಅವರ ಶೈಲಿಯ ಪ್ರಮುಖ ಅಂಶಗಳು,

ಸ್ಥಳೀಯ ಮತ್ತು ಜಾಗತಿಕತೆಯ ಸಮ್ಮಿಲನ: ಇವರ ಚಿತ್ರಗಳಲ್ಲಿ ಭಾರತೀಯ ಹಾಗೂ ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಸಂಸ್ಕೃತಿಯ ಬೇರುಗಳಿರುತ್ತವೆ. ಅದೇ ಸಮಯದಲ್ಲಿ ಅವು ಜಾಗತಿಕ ಮಟ್ಟದ ಆಧುನಿಕ ಕಲಾ ಶೈಲಿಯನ್ನು ಮೈಗೂಡಿಸಿಕೊಂಡಿರುತ್ತವೆ.

ಅತಿವಾಸ್ತವಿಕತೆ ವಾಸ್ತವ ಬದುಕಿನ ಆಗುಹೋಗುಗಳನ್ನು ಅತಿವಾಸ್ತವಿಕ ಶೈಲಿಯಲ್ಲಿ ಅಭಿವ್ಯಕ್ತಿಸುವುದು ಇವರ ಕಲಾಕೃತಿಗಳ ಪ್ರಮುಖ ಆಕರ್ಷಣೆ. ಕನಸು, ಪುರಾಣ, ಮತ್ತು ವಾಸ್ತವಗಳ ನಡುವಿನ ಗೆರೆಯನ್ನು ಅಳಿಸುವಂತಹ ಚಿತ್ರಗಳನ್ನು ಇವರು ರಚಿಸಿದ್ದಾರೆ.

ಬಣ್ಣಗಳ ಸಂಯೋಜನೆ: ಗಾಢವಾದ ಬಣ್ಣಗಳ ಬಳಕೆ ಮತ್ತು ಸೂಕ್ಷ್ಮವಾದ ರೇಖಾಚಿತ್ರಗಳ ಮೂಲಕ ವೀಕ್ಷಕರನ್ನು ಚಿಂತನೆಗೆ ಹಚ್ಚುವ ಶಕ್ತಿ ಇವರ ಕ್ಯಾನ್ವಾಸ್‌ಗಳಿಗಿದೆ. ಮಾನವನ ಒಳತೋಟಗಳು ಮತ್ತು ನಿಸರ್ಗದೊಂದಿಗಿನ ಸಂಬಂಧ ಇವರ ನೆಚ್ಚಿನ ವಸ್ತುಗಳು.

## ಅಂತಾರಾಷ್ಟ್ರೀಯ ಮನ್ನಣೆ

ಶಿವಪ್ರಸಾದ್ ಅವರ ಪ್ರತಿಭೆ ಕೇವಲ ಕರ್ನಾಟಕ ಅಥವಾ ಭಾರತಕ್ಕೆ ಸೀಮಿತವಾಗಿಲ್ಲ. ಇವರ ಕಲಾಕೃತಿಗಳು ಲಂಡನ್, ಯುರೋಪ್ ಸೇರಿದಂತೆ ಜಗತ್ತಿನ ಹಲವು ಪ್ರತಿಷ್ಠಿತ ಆರ್ಟ್ ಗ್ಯಾಲರಿಗಳಲ್ಲಿ ಪ್ರದರ್ಶನಗೊಂಡಿವೆ. ಪಾಶ್ಚಿಮಾತ್ಯ ಕಲಾ ಜಗತ್ತಿನ ದಿಗ್ಗಜರೊಂದಿಗೆ ಒಡನಾಟ ಹೊಂದಿರುವ ಇವರು, ಯುರೋಪಿನ ಕಲಾ ಚಿಂತನೆಗಳನ್ನು ಅರಗಿಸಿಕೊಂಡು ತಮ್ಮದೇ ಆದ ವಿಶಿಷ್ಟ ದೃಶ್ಯ ಭಾಷೆಯನ್ನು ರೂಪಿಸಿಕೊಂಡರು.

## ಸಾಹಿತ್ಯ ಮತ್ತು ಕಲಾ ವಿಮರ್ಶೆಗೆ ಕೊಡುಗೆ

ಕೆ.ಟಿ. ಶಿವಪ್ರಸಾದ್ ಅವರು ಕೇವಲ ಕುಂಚ ಹಿಡಿದ ಕಲಾವಿದರಲ್ಲ, ಅತ್ಯುತ್ತಮ ಚಿಂತಕ ಹಾಗೂ ಬರಹಗಾರರು ಕೂಡ ಹೌದು. ಕಲೆಯ ಕುರಿತು, ಕಲಾ ಇತಿಹಾಸದ ಕುರಿತು ಮತ್ತು ಪಾಶ್ಚಿಮಾತ್ಯ ಕಲಾ ಪ್ರಕಾರಗಳ ಕುರಿತು ಕನ್ನಡದಲ್ಲಿ ಅತ್ಯಮೂಲ್ಯವಾದ ಲೇಖನಗಳನ್ನು ಹಾಗೂ ವಿಮರ್ಶೆಗಳನ್ನು ಬರೆದಿದ್ದಾರೆ. ಕಲೆಯ ಸೈದ್ಧಾಂತಿಕ ನೆಲೆಗಟ್ಟನ್ನು ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ವಿವರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

## ಪ್ರಶಸ್ತಿ ಮತ್ತು ಗೌರವಗಳು

ಇವರ ಸುದೀರ್ಘ ಕಲಾ ಸೇವೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸೇರಿದಂತೆ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಅನೇಕ ಪ್ರತಿಷ್ಠಿತ ಗೌರವಗಳು ಸಂದಿವೆ. ಕಲಾ ಶಿಬಿರಗಳಲ್ಲಿ, ಉಪನ್ಯಾಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಇಂದಿನ ಯುವ ಕಲಾವಿದರಿಗೆ ಸದಾ ಮಾರ್ಗದರ್ಶಕರಾಗಿ ನಿಂತಿದ್ದಾರೆ.

# ಗುಂಡಾಗಳಿಗೆ ಬೆದರದ ಕೆ.ಟಿ. ಹೋರಾಟ

### ಎಚ್.ಎಂ.ವಿಶ್ವನಾಥ್ ನಮನ

## ಕೆ.ಟಿ. ಶಿವಪ್ರಸಾದ್ ಅಗಲಿಕೆಗೆ ಸಂತಾಪ



ಅಂತರಾಷ್ಟ್ರೀಯ ಖ್ಯಾತಿಯ, ಚಿತ್ರ ಕಲಾವಿದ, ಪ್ರಗತಿಪರ ಚಿಂತಕ, ಜನಪದ ಹೋರಾಟಗಾರನ ಸಾವು ನಾಡಿನ ಜನರಿಗೆ ತುಂಬಲಾರದ ನಷ್ಟ. ಇನ್ನೊಬ್ಬ ಶಿವಪ್ರಸಾದ್ ನಮ್ಮೊಂದಿಗೆ ಇಲ್ಲ. ಹಾಸನ ಜಿಲ್ಲೆಯ ಸ್ವಾತಂತ್ರ ಹೋರಾಟಗಾರರು, ಉದ್ಯಮ ಶೀಲರಾದ ಎಲ್ ಟಿ ಕಾರ್ಲೆ ಅವರ ಪುತ್ರ ಇವರು. ಜಿಲ್ಲೆಯ ರೈತ ಚಳವಳಿಯ ಹುಟ್ಟಿಗೆ ಕಾರಣವಾದವರಲ್ಲಿ ಒಬ್ಬರು.

ಇವರು 1980 ರ ದಶಕದಲ್ಲಿ ಬಾಳ್ಳು ಪೇಟೆಯಲ್ಲಿ ವಾಸವಾಗಿದ್ದರು. ಅಲ್ಲೆ ಪಕ್ಕದ ಗ್ರಾಮ ರಾಜೇಂದ್ರಪುರದಲ್ಲಿ ಒಂದು ಘಟನೆ ನಡೆಯಿತು. ಆ ಗ್ರಾಮದಲ್ಲಿ ಹತ್ತಾರು ಬಡ ಕುಟುಂಬಗಳಿದ್ದವು. ಅದರಲ್ಲಿ ಪುಟ್ಟಯ್ಯ ಎಂಬ ದಲಿತ ಕೃಷಿ ಕಾರ್ಮಿಕರು ಒಬ್ಬರು. ಆ ಊರಿನಲ್ಲಿ ಐತಾಳ್ ಎಂಬ ಶ್ರೀಮಂತ ರಾಜಕೀಯ ಪ್ರಭಾವ ಹೊಂದುವ ಒಬ್ಬ ವ್ಯಕ್ತಿ ಇದ್ದರು. ಅವರು ಪುಟ್ಟಯ್ಯ ಅವರ ಮನೆಗೆ ಹೋಗುವ ದಾರಿಗೆ ಬೇಲಿಯನ್ನ ಕಟ್ಟಿ ಅವರಿಗೆ ದಿಗ್ಬಂಧನ ಹಾಕಿದರು. ಈ ವಿಚಾರ ಪ್ರಸಾದ್ ಅವರಿಗೆ ತಿಳಿಯಿತು. ನಾನು ಆಗ ಸಕಲೇಶಪುರ ತಾಲೂಕಿನ ರೈತ ಸಂಘದ ಅಧ್ಯಕ್ಷನಾಗಿದ್ದೆ. ಇದು ನಡೆದದ್ದು 1982-83 ಸಾಲಿನಲ್ಲಿ. ಪ್ರಸಾದ್ ಅವರ ಕರೆಯ ಮೇರೆಗೆ ನಾವೆಲ್ಲರೂ ಅಲ್ಲಿಗೆ ಹೋದೆವು. ಪ್ರಸಾದ್ ಅವರ ನಾಯಕತ್ವದಲ್ಲಿ ಆ ಬೇಲಿಯನ್ನು ಕಿತ್ತಿ ಎಸೆದು ಆ ಮನೆಗೆ ರಕ್ಷಣೆ ಕೊಟ್ಟೆವು. ಐತಾಳ್ ಅವರು ತಮ್ಮ ರಾಜಕೀಯ ಪ್ರಭಾವ ಮತ್ತು ಗುಂಡಾಗಳನ್ನು ಬಳಸಿ ಚಳವಳಿಯನ್ನು ಹತ್ತಿ ಇಕ್ಕುವ ಪ್ರಯತ್ನ ಮಾಡಿದರು. ಪ್ರಸಾದ್ ಅವರಿಗೆ ಜೀವ ಬೆದರಿಕೆ ಹಾಕಿದರು. ಇದನ್ನು ಪ್ರತಿಭಟಿಸಿ 500 ಕ್ಕೂ ಹೆಚ್ಚು ಜನ ಬಾಳು ಪೇಟೆ ಇಂದ ಸಕಲೇಶಪುರದ ತನಕ ಉಪವಿಭಾಗದ ಕಛೇರಿಗೆ ಮುತ್ತಿಗೆ ಹಾಕಿ ಆ ಬಡ ಪುಟ್ಟಯ್ಯನ್ನ ಮನೆಗೆ ಹಾಕಿದ ದಿಗ್ಬಂಧನವನ್ನು ತೆರವು ಗೊಳಿಸಿ ಆ ರಸ್ತೆಯನ್ನು ಕಾನೂನು ಬದ್ಧ ರಸ್ತೆಯನ್ನಾಗಿ ಮಾಡಿದ್ದರ ಪರಿಣಾಮ ಇಂದು ಆ ಕುಟುಂಬ ನೆಮ್ಮದಿಯಾಗಿದೆ.

1983 ರಲ್ಲಿ ಬಾಳು ಪೇಟೆ ದಲಿತರ ಮೇಲೆ ಬಹಿಷ್ಕಾರ ಆದ ಸಂದರ್ಭದಲ್ಲಿ ದಲಿತರು ಮತ್ತು ಸವರ್ಣೀಯರ ಮಧ್ಯೆ ಸಮಸ್ಯೆಯನ್ನು ಬಗೆಹರಿಸಿದ ಕೀರ್ತಿ ಪ್ರಸಾದ್ ಅವರಿಗೆ ಸೇರುತ್ತದೆ.

ಇವರ ಕಲಾ ಕೃತಿಗಳು ಹಳ್ಳಿಯ ಜೀವನವನ್ನು ಪ್ರತಿನಿಧಿಸುವ, ಪ್ರಕೃತಿಯ ಮಧ್ಯೆ ಪ್ರಾಣಿ ಪಕ್ಷಿಗಳನ್ನು ಆಧಾರವನ್ನು ಇಟ್ಟುಕೊಂಡೇ ಕಲಾಕೃತಿಯನ್ನು ಮಾಡಿರುತ್ತಾರೆ. ಇವು ಜಗತ್ಪ್ರಸಿದ್ಧವಾಗಿದೆ. ಇವರು ಅತ್ಯುತ್ತಮ್ಮ ವಾಸ್ತುಶಿಲ್ಪಿಗಾರ. ತೇಜಸ್ವಿ ಅವರ ಮನೆ, ಕುಪ್ಪಳ್ಳಿ ಯಲ್ಲಿ ಇರುವ ಶಾಂತಿ ವನ ಇವೆಲ್ಲದು ಇವರದ್ದೇ ವಾಸ್ತುಶಿಲ್ಪ. ತಳಸಮುದಾಯದ ಜನರನ್ನ ತನ್ನ ಕುಟುಂಬ ಎಂದು ಭಾವಿಸಿ ಅವರೊಟ್ಟಿಗೆ ಜೀವನ ನಡೆಸಿದ ಧೀಮಂತ ನಾಯಕ. ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಲೋಹಿಯಾ ವಿಚಾರ ಧಾರೆಯ ಪ್ರತೀಕಾರಕರಾಗಿದ್ದರು. ಇವರನ್ನು ಮರೆಯುವುದುಂಟೆ.

ಗೆಳೆಯ ನಿನಗೊಂದು ಕೊನೆಯ ನಮಸ್ಕಾರ.



**ವಂದನೆಗಳೊಂದಿಗೆ,**

**ಹೆಚ್ ಎಂ ವಿಶ್ವನಾಥ್**

**ಮಾಜಿ ಶಾಸಕರು**

**ಸಕಲೇಶಪುರ.**

# ಕೆಪಿಟಿಸಿಎಲ್ ಖಾಸಗೀಕರಣಕ್ಕೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವ್ಯವಸ್ಥಿತವಾಗಿ ಕೆಪಿಟಿಸಿಎಲ್ ಅನ್ನು ಖಾಸಗೀಕರಣ ಮಾಡಲು ಹೊರಟಿದ್ದು ಇದರಿಂದ ರೈತರಿಗೆ ನಷ್ಟವಾಗಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ರೈತ ಸಂಘದ ಕಾರ್ಯಾಧ್ಯಕ್ಷ ಬೋರನಕಪ್ಪಲು ಶಿವಲಿಂಗಪ್ಪ ಮಾತನಾಡಿ, ರಾಜ್ಯದಲ್ಲಿ 70 ಲಕ್ಷಕ್ಕೂ ಹೆಚ್ಚು ಪಂಪ್ ಸೆಟ್ ಬಳಸಿ ಕೊಳವೆ ಬಾವಿ ನೀರಿನಿಂದ ಕೃಷಿ ಚಟುವಟಿಕೆಯನ್ನು ರೈತರು ಮಾಡುತ್ತಿದ್ದಾರೆ.ಅಲ್ಲದೆ ಹೊಲ ಗದ್ದೆ ತೋಟಗಳಲ್ಲಿ ರೈತರು ಮನೆ ನಿರ್ವಹಿಸಿಕೊಂಡಿದ್ದು ವಿದ್ಯುತ್ ಇಲಾಖೆಯನ್ನ ಖಾಸಗಿ ಅವರ ಕೈಗೆ ಒಪ್ಪಿಸಿದರೆ ಭವಿಷ್ಯದಲ್ಲಿ ರೈತರು ಬಾರಿ ಬೆಲೆ ಎತ್ತಬೇಕಾಗುತ್ತದೆ.ಇದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನುವು ಮಾಡಿಕೊಟ್ಟಿದ್ದೇ ಆದರೆ ರೈತ ಸಂಘ ಹಾಗೂ ಹಸಿರು ಸೇನೆ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.




ಇದೇ ರೀತಿ ಮಾಜಿ ಮುಖ್ಯಮಂತ್ರಿಗಳಾಗಿದ್ದ, ಎಸ್.ಎಂ ಕೃಷ್ಣ ನೇತೃತ್ವದ ಸರ್ಕಾರ ರೈತ ಸಂಘಟನೆಯ ವಿರೋಧದ ನಡುವೆಯೂ ವಿದ್ಯುತ್ ಮೀಟರ್ ಗಳನ್ನು ಅಳವಡಿಸಲು ಮುಂದಾದಾಗ ಪ್ರೊ. ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ವಿದ್ಯುತ್ ಇಲಾಖೆ ಅಳವಡಿಸಿದ್ದ ಮೀಟರ್ ಗಳನ್ನು ಜಿಲ್ಲಾಧಿಕಾರಿ ಕಚೇರಿ ಮುಂದೆ ತಂದು ರೈತರು ಸುರಿದಿದ್ದನ್ನ ಸರ್ಕಾರ ಅರಿತುಕೊಳ್ಳಲಿ ಎಂದು ಎಚ್ಚರಿಸಿದರು.

# ಶಿವಲಿಂಗೇಗೌಡಗೆ ಸಚಿವ ಸ್ಥಾನ ನೀಡಲು ಒತ್ತಾಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕು ಎಂದು ದಲಿತ ಪ್ರಗತಿಪರ ಹೋರಾಟಗಾರ ದಿನೇಶ್ ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಈ ಬೇಡಿಕೆ ಇಡುತ್ತಿದ್ದೇವೆ.

ಯಾವುದೇ ಪಕ್ಷದ ಪರವಾಗಿ ಹೇಳುತ್ತಿಲ್ಲ. ಜನಹಿತದ ಉದ್ದೇಶದಿಂದ ನಮ್ಮ ಮನದ ಇಂಗಿತ ಮುಂದಿಡುತ್ತಿದ್ದೇವೆ ಎಂದರು.

ಮೂರು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದರೂ ಹಾಸನ ಕ್ಷೇತ್ರ ಹಾಗೂ ಜಿಲ್ಲೆಯಲ್ಲಿ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಕ್ಷೇತ್ರದಲ್ಲಿ ಟ್ರಾಫಿಕ್ ಸೇರಿದಂತೆ ಹಲವು ಮೂಲಸೌಕರ್ಯ ಸಮಸ್ಯೆಗಳಿದ್ದು, ಶಾಸಕ ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ರಾಜ್ಯದಲ್ಲಿ ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದ ಅವರು, ಅಧಿಕಾರ ಹಂಚಿಕೆಯ ಭಾಗವಾಗಿ ಉಳಿದ ಅವಧಿಯಲ್ಲಿ ದಲಿತ ಸಮುದಾಯದ ನಾಯಕನಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯದ ಹಿರಿಯ ದಲಿತ ನಾಯಕರು ಈ ವಿಚಾರದಲ್ಲಿ ಹೆಚ್ಚು ಧ್ವನಿ ಎತ್ತದಿರುವುದು ಸಮುದಾಯಕ್ಕೆ ಬೇಸರ ತಂದಿದೆ ಎಂದರು.

ಮುಂದಿನ ಒಂದು ವರ್ಷದೊಳಗೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ರಾಜ್ಯಾದ್ಯಂತ ದಲಿತ ಹೋರಾಟಗಾರರು ಒಗ್ಗೂಡಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಲ್ಲದೆ, ದಲಿತ ಸಮುದಾಯದ ಬೇಡಿಕೆಗಳನ್ನು ನಿರ್ಲಕ್ಷಿಸಿದರೆ ಕಾಂಗ್ರೆಸ್ ವಿರುದ್ಧ ದಲಿತ ಸಮುದಾಯ ಸಂಘಟಿತವಾಗಿ ನಿಲ್ಲಲಿದ್ದು, ಅಗತ್ಯವಿದ್ದರೆ ಕರ್ನಾಟಕ ದಲಿತ ಪಕ್ಷ ಎಂಬ ಹೊಸ ರಾಜಕೀಯ ಪಕ್ಷ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸ್ಟೀಫನ್, ಮೋಹನ್, ಥಾಮಸ್, ವೆಂಕಟೇಶ್ ಮೊದಲಾದವರಿದ್ದರು.

# ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತ ಚುನಾವಣಾ ಆಯೋಗ, ಹಾಸನ ಜಿಲ್ಲಾಡಳಿತ, ಸ್ವೀಪ್ ಸಮಿತಿ ವತಿಯಿಂದ ನಗರದಲ್ಲಿಂದು ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಚಾಲನೆ ದೊರೆಯಿತು.

ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರ ನಿವಾಸಕ್ಕೆ ಜಿಲ್ಲಾಧಿಕಾರಿ ಕೆ.ಎಸ್ ಲತಾಕುಮಾರಿ ಅವರು ಭೇಟಿ ನೀಡಿ ಅರ್ಜಿ ಭರ್ತಿ ಮಾಡಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಇಂದಿನಿಂದ ಒಂದು ತಿಂಗಳ ಕಾಲ ನಡೆಯುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರ ಸಮಗ್ರ ಪರಿಷ್ಕರಣೆ ಮಾಡಲಿದ್ದಾರೆ.

ಈ ವೇಳೆ ಪ್ರತಿ ಮನೆಯಲ್ಲಿ ಸದಸ್ಯರು ಅಧಿಕಾರಿಗಳು ನೀಡುವ ಅರ್ಜಿ ಭರ್ತಿ ಮಾಡಿ ಎಲ್ಲಾ ಮಾಹಿತಿ ಒದಗಿಸಿ ಈ ಕಾರ್ಯಕ್ಕೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ಅರ್ಜಿಯಲ್ಲಿ ಕೇಳಿರುವ ಸರಳ ಮಾಹಿತಿಗಳನ್ನು ಅಧಿಕಾರಿಗಳಿಗೆ ನೀಡಬೇಕು, ಮನೆಯಲ್ಲಿ ಒಬ್ಬರೇ ಸದಸ್ಯರು ಇದ್ದು ಇನ್ನುಳಿದವರು ಸ್ಥಳದಲ್ಲಿ ಇಲ್ಲದೆ ಇದ್ದರೂ ಮನೆಯಲ್ಲಿರುವ ಸದಸ್ಯರೇ ಇತರ ಸದಸ್ಯರ ಮಾಹಿತಿಯನ್ನು ಅಧಿಕಾರಿಗಳಿಗೆ ನೀಡಬಹುದು, ಅಲ್ಲದೆ ಅರ್ಜಿದಾರರ ಸಂಬಂಧಿಕರ ಬಗ್ಗೆಯೂ ಮಾಹಿತಿ ನೀಡಿ ಪರಿಷ್ಕರಣೆಯಲ್ಲಿ ಪಾಲ್ಗೊಳ್ಳಬಹುದು ಎಂದು ಮಾಹಿತಿ ನೀಡಿದರು.

ಇಂದು ಹಾಸನದಲ್ಲಿ ಬೆಳಗ್ಗೆ 7 ಗಂಟೆಯಿಂದಲೇ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಆರಂಭವಾಗಿದ್ದು, ಈಗಾಗಲೇ ಮತಗಟ್ಟೆ ಅಧಿಕಾರಿಗಳು ಪ್ರತೀ ಮನೆ ಮನೆಗೆ ಭೇಟಿ ನೀಡಲು ಆರಂಭಿಸಿದ್ದಾರೆ.

ಜೊತೆಗೆ ತಾನು ಇಂದು ಖುದ್ದು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರ ಮನೆಗೆ ಆಗಮಿಸಿದ್ದು, ಅವರ ಕೈಯಿಂದಲೇ ಅರ್ಜಿ ಭರ್ತಿ ಮಾಡಿಸುವ ಮೂಲಕ ಪರಿಷ್ಕರಣೆ ಆರಂಭಿಸಿದ್ದೇವೆ ಎಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ಗೀತಾ, ಹಾಸನ ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಚುನಾವಣಾ ಶಾಖೆಯ ಅಧಿಕಾರಿಗಳು ಹಾಗೂ ಮತಗಟ್ಟೆ ಅಧಿಕಾರಿಗಳು ಇದ್ದರು.

# ನೇಪಥ್ಯಕ್ಕೆ ಸರಿದ 'ಸಾಧನ' ಚಿತ್ರಮಂದಿರ

## ನಿರ್ಜೀವ ಕಟ್ಟಡದಲ್ಲಿನ ಜೀವಂತ ನೆನಪುಗಳು!

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಾಧನಾ...! ವಿಷಯ ತಿಳಿದು ಅವ್ಯಕ್ತ ಅನುಭವ, ಕಸಿವಿಸಿಯಾಯ್ತು. ನಮ್ಮ ಮನೆಮಂದಿಗಂತೂ ಅದು ಕೇವಲ ಕಟ್ಟಡವಾಗಿರಲಿಲ್ಲ; ಕೇವಲ ಚಿತ್ರಮಂದಿರವೂ ಆಗಿರಲಿಲ್ಲ. ಅದರಲ್ಲಿ ನಾವು ನೋಡಿರೋ ಸಿನಿಮಾಗಳು ಕೆಲವೇ (ಮುವ್ವತ್ತೇಳು ವರ್ಷದಲ್ಲಿ ಅದರ ಪಕ್ಕದಲ್ಲೇ ಇದ್ದೂ ಒಂದು ಡಜನ್?) ಇದ್ದೀತಾದರೂ, ವಿದ್ಯುತ್ ಕೈಕೊಟ್ಟಾಗಲೆಲ್ಲಾ ಅದರ ಜನರೇಟರಿನ ಸದ್ದಿನ ತೊಂದರೆ ಇದ್ದಿದ್ದರೂ, ಅದೇನೋ ಅದರೊಡನೆ ನಮಗದರೊಂದಿಗೆ ಒಂದು ಅವರ್ಣನೀಯ ಬಂಧವಿತ್ತು. ಪ್ರತಿದಿನವೂ ಪ್ರದರ್ಶನದ ಆರಂಭದಲ್ಲಿನ 'ಗಜಮುಖನೆ, ಗಣಪತಿಯೆ ನಿನಗೆ ವಂದನೆ...', 'ನಂಬಿದನಯ್ಯಾ ನಾಗಾಭರಣ...', 'ನ್ಯಾಯ ನೀತಿ ಮೂರ್ತಿವೆತ್ತ ಸತ್ಯದೈವವೆ...' ಮುಂತಾದ ಹಾಡುಗಳು, ಮಧ್ಯಂತರದಲ್ಲಿನ ಬಿತ್ತರವಾಗಿತ್ತಿದ್ದ 'ಕಾಲವನ್ನು ತಡೆಯೋರು ಯಾರೂ ಇಲ್ಲ...' ಮುಂತಾದ ಹಾಡುಗಳು ಇನ್ನೂ ಕಿವಿಯಲ್ಲಿ ಗುಯ್ಗುಟ್ಟುತ್ತವೆ. ಬೇಸಿಗೆ ರಜೆಯಲ್ಲಿ ನೆಂಟರು ಬಂದಾಗ, ಚಿತ್ರಮಂದಿರದಲ್ಲಿ ಸೆಖೆಯಲ್ಲಿ ಎಂದು ಆಗಾಗ ಕದ ತೆರೆಯುತ್ತಿದ್ದಾಗ ತುಸು ಜೋರಾಗಿ ಕೇಳುತ್ತಿದ್ದ ಸಿನಿಮಾ ಸಂಭಾಷಣೆ, ಮನೆ ಮಹಡಿಯಿಂದ ತುಸುವೇ ಕಾಣುತ್ತಿದ್ದ ಚಿತ್ರವೇ ಅವರನ್ನು ಖುಷಿ ಪಡಿಸುತ್ತಿದ್ದುದನ್ನು ನೋಡಿ ನಮಗೇನೋ ವಿಸ್ಮಯಭರಿತ ಆನಂದ. ಆಗಿನ ಕಾಲ ಅಷ್ಟು ಸರಳವಾಗಿತ್ತು! ಬಯಕೆಗಳು ದೊಡ್ಡದಾಗಿರಲಿಲ್ಲ! ಆ ಅನುಭವವನ್ನು ನಮ್ಮ ಮಾವನ ಮಗಳೊಬ್ಬಳು ಇನ್ನೂ ಮೆಲುಕು ಹಾಕುತ್ತಾಳೆ.

ಟಾಕೀಸು ನಮ್ಮ ಮನೆಗೆ landmark ಆಗಿತ್ತು. ನಮ್ಮ ಮನೆಯ ವಿಳಾಸದಲ್ಲಿ 'Behind Sadhana Talkies' ಎಂಬುದು ಖಾಯಂ ಸ್ಥಾನ ಪಡೆದಿತ್ತು. ಹಾಗಾಗಿ ನಮ್ಮ ಮನೆಯನ್ನು ಗುರುತಿಸಲು ಯಾರಿಗೂ ಕಷ್ಟವಾಗುತ್ತಿರಲಿಲ್ಲ. ಸಿನಿಮಾ ನೋಡಲೆಂದು ಬರುತ್ತಿದ್ದ ಊರಿನ ಬೇರೆ ಪ್ರದೇಶದ ನಮ್ಮ ಪರಿಚಿತ, ಆಪ್ತ ಜನ, ನಮ್ಮ ಮನೆಯ ಸದಸ್ಯರ ಗೆಳೆಯರು, ನಮ್ಮ ಮನೆಗೂ ಬಂದಾಗ ಖುಷಿಯಾಗುತ್ತಿತ್ತು. ಅಂಥ ಸಂದರ್ಭದಲ್ಲಿ (೭ನೇ ತರಗತಿಯ ಅಂತಿಮ ಪರೀಕ್ಷೆ ಮುಗಿದ ದಿನ) ನನ್ನ ಆಪ್ತ ಗೆಳೆಯ ಗೋಪಿ ಬಂದಿದ್ದ. ಅನಿರೀಕ್ಷಿತವಾಗಿ ನಾನೂ ಅವನೊಂದಿಗೆ ಸಿನಿಮಾಗೆ ಹೋಗಿದ್ದೆ. ಗೋಪಿ ನಮ್ಮ ಸ್ನೇಹಿತರ WhatsApp ಬಳಗಕ್ಕೆ ಸೇರಿದ ನಂತರ ನಾನು ಮಾಡಿದ ಮೊದಲ ಕರೆಯಲ್ಲಿ ಚಿತ್ರ 'ಪ್ರೀತಿ ವಾತ್ಸಲ್ಯ' ಎಂದು ೪೫ ವರ್ಷಗಳ ಹಿಂದೆ ನೋಡಿದ ಆ ಚಿತ್ರದ ಹೆಸರು ಹೇಳಿದಾಗ ಪರಮಾದಶ್ಚರ್ಯವಾಗಿ ರೋಮಾಂಚಿತನಾಗಿದ್ದೆ. ಇಂಥದ್ದೇ ಮತ್ತೊಂದು ಸಂದರ್ಭದಲ್ಲಿ ಸಿನಿಮಾಗೆಂದು ಬಂದ ನನ್ನ ಪ್ರಾಥಮಿಕ ಶಾಲಾ ಶಿಕ್ಷಕಿ ಸಿಸ್ಟರ್ ಪ್ರಫುಲ್ಲ ಮತ್ತು ಕೆಲವರು ಮಳೆ ಬಂದ ಕಾರಣ ನಮ್ಮ ಮನೆಗೆ ಬಂದು, ಸಿನಿಮಾ ಟಿಕೆಟ್ ಸಿಗದೆ, ನಮ್ಮ ಮನೆಯಲ್ಲಿ ದೋಸೆ ತಿಂದು ಹೋಗಿದ್ದರು!

ನಾನೂ ಸೇರಿ ನಮ್ಮ ಮನೆಯವರಿಗೆ ಸಿನಿಮಾ ಖಯಾಲಿ ಹೆಚ್ಚೇನೂ ಇರಲಿಲ್ಲ; ಈಗಂತೂ ಇಲ್ಲವೇ ಇಲ್ಲ, ಬಿಡಿ. ಹಾಗಾಗಿ, ಎಷ್ಟೋ ದಿನಗಳು



**ಅರಸೀಕೆರೆಯ ಹೆಸರಾಂತ ಶಿಕ್ಷಕ ಎನ್.ಕೆ ಮೇಷ್ಟ್ರು ಪುತ್ರ, ಅಂಚೆ ಇಲಾಖೆ ನಿವೃತ್ತ ನೌಕರ ನಾಗೇಶ್ ಅವರು, ಆಟ ನಿಲ್ಲಿಸಿದ ಅರಸೀಕೆರೆಯ ಸಾಧನಾ ಚಿತ್ರಮಂದಿರದೊಂದಿಗೆ ಬೆಸೆದುಕೊಂಡಿರುವ ನೆನಪುಗಳನ್ನು ಬರೆದಿದ್ದಾರೆ. ಚಿತ್ರಮಂದಿರಗಳು ಹೇಗೆ ನಮ್ಮ ಬದುಕಿನ ಬಹುಮುಖ್ಯ ಭಾಗವಾಗಿದ್ದ ಪೀಳಿಗೆ ನಮ್ಮದು ಎನ್ನುವುದಕ್ಕೆ ಈ ಬರಹ ಸಾಕ್ಷಿಯೂ ಹೌದು**

ಚಿತ್ರಮಂದಿರದಲ್ಲಿ ಇರುವ ಚಲನಚಿತ್ರ ಯಾವುದು ಎಂದೇ ಗೊತ್ತಿರುತ್ತಿರಲಿಲ್ಲ. ನಮ್ಮ ಮನೆಯ ಮುಂದೆಯೇ ಹಾಸನ ರಸ್ತೆಯ ಜನ ಒಳದಾರಿಯಾಗಿ ರೈಲು ಹಳಿಯನ್ನು ದಾಟಿ ಸಿನಿಮಾ ನೋಡಲು ಬರುವಾಗ ನಮ್ಮ ಮನೆಯ ಮುಂದಯೇ ಹೋಗಬೇಕಾಗಿತ್ತು. ಹಾಸನ ರಸ್ತೆಯಲ್ಲಿ ಹೆಚ್ಚಾಗಿ ತಮಿಳಿಗರು, ಇಲ್ಲವೇ ಮುಸಲ್ಮಾನರು ಆಗ ಇದ್ದರು. ಹಾಗಾಗಿ, ಮನೆಯ ಮುಂದೆ ಹೆಚ್ಚು ಜನ ಹೋದ ದಿನ ಮಂದಿರದಲ್ಲಿರುವುದು ಒಂದು ಪ್ರಸಿದ್ಧ ತಮಿಳೋ ಹಿಂದಿಯದೋ ಚಿತ್ರ ಎಂದು ತಿಳಿಯುತ್ತಿತ್ತು. ಇನ್ನು, ನನ್ನ ಕಾಲೇಜು ದಿನಗಳಲ್ಲಿ, ಈಸ್ಟ್ ಅಂಚೆ ಕಚೇರಿಗೆ ಕೆಲಸಕ್ಕೆ ಹೋಗೋ ದಿನಗಳಲ್ಲಿ ಚಿತ್ರಮಂದಿರದ ಮುಂದೆಯೇ ಹೋಗಲೇಬಾಗಾಗಿತ್ತಲ್ಲ, ಆ ಸಂದರ್ಭಗಳಲ್ಲೆಲ್ಲಾ ಸಿನಿಮಾ ಖಯಾಲಿ ಇರದಿದ್ದರೂ ಅದೇಕೋ ನನ್ನ ಕಣ್ಣು ಅದರ ಪೋಸ್ಟರುಗಳನ್ನು ನೋಡದೇ ಇರುತ್ತಿರಲಿಲ್ಲ.

ಒಮ್ಮೆ, ನಾವು 'ಮನೆಮನೆ ಕಥೆ' ಚಿತ್ರಕ್ಕೆ ಹೋಗಲು ತೀರ್ಮಾನಿಸಿದ್ದೆವು. ನಮ್ಮ ಮನೆಯಲ್ಲೇ ಹೈಸ್ಕೂಲ್ ಓದುತ್ತಿದ್ದ ನಮ್ಮ ಮಾವನ ಮಗ ಸಿನಿಮಾ ಟಿಕೆಟ್ ಕೊಳ್ಳಲು ಹೋದ. ಟಿಕೆಟ್ ಕೊಳ್ಳಲು ಕೌಂಟರಿನಲ್ಲಿ ಹಣ ಕೊಟ್ಟ (ರೂ. ಐದಾರು ಇದ್ದೀತು. ಆಗ ಮಧ್ಯಮ ವರ್ಗದ ನಮ್ಮಂಥವರಿಗೆ ಅದಕ್ಕೇ ಸಾಕಷ್ಟು ಬೆಲೆ ಇತ್ತೆಂಬುದಂತೂ ಸತ್ಯ). ಆದರೆ, ಕೊಟ್ಟ ಹಣ ಟಿಕೆಟ್ ಕೊಡುತ್ತಿದ್ದ ವ್ಯಕ್ತಿಯ ಕೈ ಸೇರದೆ, ಕೌಂಟರಿನ ಒಳಗೆ ಬಿದ್ದುಬಿಟ್ಟಿತು. ಅಂದು ಜನಸಂದಣಿ ಹೆಚ್ಚಿತ್ತು. ಟಿಕೆಟ್ ಕೊಡುತ್ತಿದ್ದ ವ್ಯಕ್ತಿಯು ತನಗೆ ಹಣ ಕೊಟ್ಟಿಲ್ಲವೆಂದು ಪಟ್ಟು ಹಿಡಿದು, ಟಿಕೆಟ್ ಕೊಡಲು ನಿರಾಕರಿಸಿದ. ನಾವು ನಿರಾಶೆಯಿಂದ, ಹ್ಯಾಪುಮೋರೆ ಹಾಕಿಕೊಂಡು ಮನೆಗೆ ಹಿಂದಿರುಗಿದೆವು. ಅಟ್ಟದಿಂದ ಬಿದ್ದೋರಿಗೆ ದೊಣ್ಣೆ ಪೆಟ್ಟು ಎಂಬಂತೆ, ಅಮ್ಮ ನಮ್ಮನ್ನು ಬೇಜವಾಬ್ದಾರರು ಎಂದು ತುಂಬಾ ಬೈದರು. ಅಂತೂ, ಅಂದೆಲ್ಲಾ ಮನೆಯಲ್ಲಿ ಮೂಷಾವಸ್ಥೆ! ಇಷ್ಟಂತೂ ನಿಜ: ನಾವಂದು ಚಿತ್ರ ನೋಡಿದ್ದರೆ ಇಂದು ನಮಗದರ ನೆನಪೇ ಇರುತ್ತಿರಲಿಲ್ಲ!

ಒಮ್ಮೆ ವೇದ ಕಲಿತ ಹಿರಿಯ ಬಂಧುಗಳೊಬ್ಬರು ಯಾವುದೋ ನೆಪದಿಂದ ನಮ್ಮ ಮನೆಗೆ ಬಂದಿದ್ದರು. ಆಗ ಸಾಧನಾದಲ್ಲಿ ರಾಜ್‌ರ ಸೂಪರ್ ಹಿಟ್ ಚಿತ್ರ 'ಶಂಕರ್‌ಗುರು' ನಡೆಯುತ್ತಿತ್ತು. ಮನೆಯಲ್ಲಿ ಅದರ ಬಗ್ಗೆ ಮಾತೂ ನಡೆದಿತ್ತು.

ಮರುದಿನ ಬೆಳಗಿನ ಉಪಾಹಾರವಾದ ಸ್ವಲ್ಪ ಹೊತ್ತಿನ ಮೇಲೆ ಆ ಹಿರಿಯರು ಮನೆಯಲ್ಲಿಲ್ಲದುದು ಗನಮಕ್ಕೆ ಬಂದಿತು. ಸುಮಾರು ಹೊತ್ತು ಅಕ್ಕಪಕ್ಕ ಹುಡುಕಿದರೂ ಅವರು ಕಾಣದೆ ತುಸು ದಿಗಿಲಾಯಿತು. ಏನೂ ತೋಚದೆ ಆತಂಕದಲ್ಲಿ ಕುಳಿತಿದ್ದೆವು (ನನಗಾಗ ಏಳೆಂಟು ವರ್ಷವಿದ್ದೀತು).

ಮಧ್ಯಾಹ್ನ ಸುಮಾರು ೧ ಗಂಟೆಗೆ ಆ ಹಿರಿಯರು ಮನೆಗೆ ಬಂದಾಗ ನಮಗೆ ಉಸಿರು ಬಂದಂತಾಯಿತು. ಬರುತ್ತಲೇ ಅವರು ನಮ್ಮನ್ನು ಬಯ್ಯಲಾರಂಭಿಸಿದರು (ಕಲ್ಪಿತ):

ಬಂಧು: , ಅದರ ಮನೆ ಹಾಳಾಗ, ಎಲ್ಲಾ ದಂಡ ಆಯ್ತು, ಛೇ!

ನಮ್ಮಪ್ಪ: ಯಾಕೆ ಭಾವ, ಏನಾಯ್ತು? ಎಲ್ಲಿ ಹೋಗಿದ್ರಿ? ನಾವು ನಿಮ್ಮನ್ನು ಹುಡುಕಿ ಸುಸ್ತಾದ್ವಿ. ಏನು ವಿಷ್ಯ?

ಬಂಧು: ಅದೇನೋ ಮನೆಹಾಳ್ ಪಿಚ್ಚರ್ಗೆ ಹೋಗಿದ್ದೆ ಕಣೋ. ಅಲ್ಲ ಕೃಷ್ಣಮೂರ್ತಿ, ನೀನಾದ್ರೂ ಹೇಳ್ಬಾರ್ದಾ? ಥ!

ಅಪ್ಪ: ವಿಷ್ಯ ಹೇಳ್ಬಾರ್ದಾ ನೀವು ಸರಿಯಾಗಿ...

ಬಂಧು: ಅಲ್ಲ ಕಣೋ, ನೀವೆಲ್ಲಾ ನೆನ್ನೆ ಪಕ್ಕದ ಟಾಕೀಸಿಗೆ ಬಂದಿರೋ ಶಂಕರರ ಯಾವುದೋ ಹೊಸ ಪಿಚ್ಚರ್ ಬಗ್ಗೆ ಮಾತಾಡ್ತಿದ್ದರಲ್ಲ, ನಂಗೂ ಮನಸ್ಸಾಯ್ತು. ಏನೋ ಶಂಕರಾಚಾರ್ಯರ ಗುರುಗಳ ಬಗ್ಗೆ ಪಿಚ್ಚರ್ ಅಂಡ್ಕೊಂಡು ಹೋದ್ರೆ, ಏನೋ ಮನೆಹಾಳ್ ಪಿಚ್ಚರ್‌ಗೆ ಹೋದ್ದಾಗಾಯ್ತು. ಅದೇನೋ ಅವಳಿಗಳಿಬ್ರು, ಅಮ್ಮಂದ್ರು ಬೇರೆ ಅಂತೆ. ಇದೇನ್ ಕಥೆಯೋ ದೇವ್ರೋ ಬಲ್ಲ. ಆ ಹುಡೀರೋ... ರಾಮರಾಮಾ...! ಈ ಚಂದಕ್ಕೆ ಅಲ್ಲೀಗ್ ಹೋಗಿ time waste ಮಾಡಿ, ದುಡ್ಡ ದಂಡ... ತಲೆ ಚಚ್ಕೋಬೇಕು, ಕರ್ಮಕರ್ಮ!

ನಾವೆಲ್ಲಾ ಜೋರಾಗಿ ನಕ್ಕೆವು. ನನಗೆ ಪೂರ್ತಿ ಅರ್ಥವಾಗದಮದ್ದರೂ ನಗೆಗೆ ದನಿಗೂಡಿಸಿದ್ದಂತೂ ಸತ್ಯ.

ಅಪ್ಪ: ಅಲ್ಲ ಭಾವ, ಹೊರಗಡೆ ಹಾಕಿರೋ ಚಿತ್ರ ನೋಡ್ಲಿಲ್ವಾ?

ಬಂಧು: ನಾನ್ಯಾಕೆ ನೋಡ್ಲಿ, ನಿನ್ನ ನಂಬಿ ಹೋದೆ.

ಅಪ್ಪ: ಸರಿ, ಶುರೂಲೇ ನೀವಂದೊಂಡ ಕಥೆ ಅಲ್ಲ ಅಂದ್ಮಲೆ ಎದ್ದರೋದಲ್ವಾ?

ಬಂಧು: ಕಾಸು ಕೊಟ್ಟಾಗಿತ್ತಲ್ಲ, ಸುಮ್ಮೆ ಎದ್ಬಂದ್ರೆ ಕಾಸೂ ಹಾಳು, ತಲೆಯೂ ಬೋಳು! ಅದೇನ್ ತೋರಸ್ತಾರೆ ನೋಡೋಣ ಅಂತ ಕೂತ್ರೆ ಕಥೆ ಅರ್ಥವೂ ಆಗ್ಲಿಲ್ಲ... ಅಸಹ್ಯ, ಥ! ನನ್ನ ಎರಡು ರೂಪಾಯೂ ಹೋಯ್ತು, ತಲೆ ಚಚ್ಕೋಬೇಕು, ಹೋಗು!

ನಾವು ಮನೆ ಮಂದಿಯೆಲ್ಲಾ ಆ ದಿನ ಪೂರ್ತಿ ನಗೆಗಡಲಲ್ಲಿ ತೇಲಿದ್ದೇ ತೇಲಿದ್ದು ಆ. ನಾನೂ ಸುಮ್ಮನೆ ಅವರೊಂದಿಗೆ ಚೆನ್ನಾಗಿ ನಕ್ಕಿದ್ದೆ. ಆಸ್ತಮಾ ಇದ್ದ ನಮ್ಮಪ್ಪನಿಗೆ ಆ ನಗೆಗಡಲಲ್ಲಿ ಅಂದು ಕೆಮ್ಮು ಬಂತೋ ಇಲ್ಲವೋ ನೆನಪಿಲ್ಲ!

ಹೀಗೆ ನೆನಪಿನ ಬುತ್ತಿ ಬಿಚ್ಚುತ್ತಲೇ ಇರುತ್ತದೆ. ಇಂದಿನ ವಾಸ್ತವತೆ ನನ್ನನ್ನು ನೋಡಿ ನಗುತ್ತಿದೆ. ಆದರೆ ಮನುಷ್ಯ ಭಾವಜೀವಿ ತಾನೆ? ಕಾಲಾಯ ತಸ್ಮಿನಮಃ

## ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಕಂಚಿ ಕಾಮಾಕ್ಷಿ ಸಿಲ್ಕ್ ಸೀರೆ ಮೇಳ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವರಮಹಾಲಕ್ಷ್ಮೀ ಹಬ್ಬದ ಅಂಗವಾಗಿ ಕಂಚಿ ಕಾಮಾಕ್ಷಿ ಸಿಲ್ಕ್ ವತಿಯಿಂದ ನಗರದಲ್ಲಿ ಸಿಲ್ಕ್ ಸೀರೆ ಮೇಳವನ್ನು ಆಯೋಜಿಸಲಾಗಿದೆ ಎಂದು ಪ್ರಾಯೋಜಕ ಪ್ರದೀಪ್ ತಿಳಿಸಿದರು.

ಜುಲೈ 3 ರಿಂದ 7 ರವರೆಗೆ ನಗರದ ರವೀಂದ್ರನಗರದ ಶ್ರೀ ರಾಘವೇಂದ್ರ ಮಠದಲ್ಲಿ ನಡೆಯಲಿರುವ ಈ ಮೇಳದಲ್ಲಿ ಪ್ಯೂರ್ ಮೈಸೂರು ಸಿಲ್ಕ್, ಸೆಮೀ ಕ್ರೇಪ್ ಮೈಸೂರು ಸಿಲ್ಕ್, ಬೆಂಗಳೂರು ಸಿಲ್ಕ್, ಕಾಂಚೀಪುರಂ, ಬನಾರಸ್ ಹಾಗೂ ಫ್ಯಾನ್ಸಿ ಸೀರೆಗಳು ರಿಯಾಯಿತಿ ದರದಲ್ಲಿ





ಲಭ್ಯವಿರಲಿವೆ ಎಂದರು.

ಹಬ್ಬದ ಖರೀದಿಗೆ ಅನುಕೂಲವಾಗುವಂತೆ ವಿಶೇಷ ಒಂದು ಸೀರೆ ತೆಗೆದುಕೊಂಡು ಮತ್ತೊಂದು ಉಚಿತ ಆಫರ್ ಕೂಡ ನೀಡಲಾಗಿದ್ದು, ಗ್ರಾಹಕರು ಇದರ ಪ್ರಯೋಜನ ಪಡೆಯಬಹುದು ಎಂದು ತಿಳಿಸಿದರು.

ಸೀರೆ ಮೇಳವು ಪ್ರತಿದಿನ ಬೆಳಿಗ್ಗೆ 10.30 ರಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿದೆ. ಹಾಸನ ನಗರದ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ ಅವರು, ಹೆಚ್ಚಿನ ಮಾಹಿತಿಗಾಗಿ 99724 42606 ನಂಬರನ್ನು ಸಂಪರ್ಕಿಸುವಂತೆ ಕೋರಿದರು.

## ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಕೇಂದ್ರ ಹೊಣೆ ಹೊರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ನಂತರದಲ್ಲಿ ವಿದ್ಯಾರ್ಥಿಗಳು ಅನುಭವಿಸಿದ ಸಂಕಷ್ಟಗಳಿಗೆ ಕೇಂದ್ರ ಸರ್ಕಾರವೇ ಹೊಣೆ, ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಜಿಲ್ಲಾ ವಕ್ತಾರ ಮಂಜುನಾಥ್ ಶರ್ಮಾ ಆಗ್ರಹಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯಕೀಯ ಶಿಕ್ಷಣ ಪ್ರವೇಶಕ್ಕಾಗಿ ದೇಶಾದ್ಯಂತ





ನಡೆದ ನೀಟ್ ಪರೀಕ್ಷೆಯಲ್ಲಿ 22.7 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಂತರ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ಖಾತ್ರಿಯಾಯಿತು. ಈ ಸಂಬಂಧ ವಿವಿಧ ರಾಜ್ಯಗಳಲ್ಲಿ ತನಿಖೆ ನಡೆಯುತ್ತಿದ್ದು, ಕೆಲ ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ ಪ್ರಶ್ನೆ ಪತ್ರಿಕೆ ಬಯಲು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ಪರೀಕ್ಷೆ ಮುಂದೂಡಿಕೆ ಮತ್ತು ಮರು ಪರೀಕ್ಷೆಯಿಂದ ವಿದ್ಯಾರ್ಥಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಕ್ತ ಸ್ಪಂದನೆ, ಸಾಂತ್ವನ ಅಥವಾ ಪರಿಹಾರ ದೊರೆತಿಲ್ಲ ಎಂದು ಟೀಕಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸಾರ್ವಜನಿಕ ಪರೀಕ್ಷೆಗಳ (ಅಕ್ರಮ ತಡೆ) ಕಾಯ್ದೆ ಇದ್ದರೂ, ಪರೀಕ್ಷಾ ಅಕ್ರಮ ತಡೆಯಲು ಸಾಧ್ಯವಾಗಿಲ್ಲ.

ಇದರಿಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಕಾರ್ಯವೈಖರಿ ಬಗ್ಗೆ ಗಂಭೀರ ಅನುಮಾನ ಮೂಡಿವೆ ಎಂದು ಆತಂಕ ಹೊರ ಹಾಕಿದರು.

## ಇತಿಹಾಸದಲ್ಲಿ ಈ ದಿನ

### ಜುಲೈ-01

1690: ಐರ್ಲೆಂಡ್‌ನ ಓಲ್ಡ್‌ಬ್ರಿಡ್ಜ್‌ನಲ್ಲಿ ನಡೆದ ಬೊಯ್ನೆ ಕದನದಲ್ಲಿ ಇಂಗ್ಲೆಂಡ್‌ನ ಪ್ರೊಟೆಸ್ಟಂಟ್ ರಾಜ ವಿಲಿಯಂ ರ ಸೈನ್ಯವು ಪದಚ್ಯುತ ರೋಮನ್ ಕ್ಯಾಥೋಲಿಕ್ ರಾಜ ಜೇಮ್ಸ್ ರನ್ನು ಸೋಲಿಸಿತು.

1858 ರಲ್ಲಿ ಲಿನ್ನಿಯನ್ ಸೊಸೈಟಿಗೆ ಚಾರ್ಲ್ಸ್ ಡಾರ್ವಿನ್ ಮತ್ತು ಆಲ್ಫೆಡ್ ರಸೆಲ್ ವ್ಯಾಲೇಸ್ ಅವರ ವಿಕಾಸದ ಕುರಿತಾದ ಪ್ರಬಂಧಗಳನ್ನು ಜಂಟಿಯಾಗಿ ಓದಿದಾಗ ಪ್ರೇಕ್ಷಕರು ಬೆರಗುಗೊಂಡು ಮೌನವಾದರು

1863 ರಲ್ಲಿ ಕರಿಯರ್ ಮತ್ತು ಐವ್ಸ್ ಪ್ರಕಟಿಸಿದ ಗೆಟ್ಟಿಸ್‌ಬರ್ಗ್ ಕದನದ ಶಿಲಾಮುದ್ರಿಕೆ.ಗುಲಾಮಗಿರಿ ವಿಭಜನೆಯು ಅಮೆರಿಕದ ಅಂತರ್ಯುದ್ಧವನ್ನು ಪ್ರಚೋದಿಸುತ್ತದೆ

1863 - ಪೆನ್ಸಿಲ್ವೇನಿಯಾದಲ್ಲಿ ಗೆಟ್ಟಿಸ್‌ಬರ್ಗ್ ಕದನ ಪ್ರಾರಂಭವಾಯಿತು, ಒಕ್ಕೂಟ ಪಡೆಗಳು ಉತ್ತರ ವರ್ಜೀನಿಯಾದ ಕಾನ್ಫೆಡರೇಟ್ ಜನರಲ್ ರಾಬರ್ಟ್ ಇ. ಲೀ ಅವರ ಸೈನ್ಯವನ್ನು ತಡೆದವು.

1867: ನ್ಯೂ ಬ್ರನ್ಸ್‌ವಿಕ್, ನೋವಾ ಸ್ಕಾಟಿಯಾ, ಒಂಟಾರಿಯೊ ಮತ್ತು ಕ್ವಿಬೆಕ್ ಪ್ರಾಂತ್ಯಗಳನ್ನು ಒಳಗೊಂಡ ಕೆನಡಾದ ಡೊಮಿನಿಯನ್ ರಚನೆಯಾಯಿತು, ಜಾನ್ ಎ. ಮ್ಯಾಕ್‌ಡೊನಾಲ್ಡ್ ಮೊದಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು.

1916: ಮೊದಲನೆಯ ಮಹಾಯುದ್ಧದಲ್ಲಿ ಸೋಮ್ ಕದನದ ಮೊದಲ ದಿನ : ಬ್ರಿಟಿಷ್ ಸೈನ್ಯವು ತನ್ನ ಅತ್ಯಂತ ಕೆಟ್ಟ ದಿನವನ್ನು ಅನುಭವಿಸಿತು , 19,240 ಜನರನ್ನು ಕಳೆದುಕೊಂಡಿತು.

1997 - ಯುನೈಟೆಡ್ ಕಿಂಗ್‌ಡಮ್ ಹಾಂಗ್ ಕಾಂಗ್ ಮತ್ತು ಹೊಸ ಪ್ರದೇಶಗಳನ್ನು ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾಕ್ಕೆ ಹಿಂದಿರುಗಿಸಿತು.

1941: ಬ್ರೂಕ್ಲಿನ್ ಡಾಡ್ಜರ್ಸ್-ಫಿಲಡೆಲ್ಫಿಯಾ ಫಿಲ್ಲಿಸ್ ಬೇಸ್‌ಬಾಲ್ ಆಟದ ಪ್ರಸಾರದ ಸಮಯದಲ್ಲಿ ಪ್ರಸಾರವಾದ ಮೊದಲ ದೂರದರ್ಶನ ಜಾಹೀರಾತಿಗಾಗಿ ಬುಲೋವಾ ವಾಚ್ ಕಂಪನಿ $9 ಪಾವತಿಸಿತು.

1967 ರಲ್ಲಿ ದಿ ಬೀಟಲ್ಸ್‌ನ ಆಲ್ಬಮ್ " ಸಾರ್ಜೆಂಟ್ ಪೆಪ್ಪರ್ಸ್ ಲೋನ್ಲಿ ಹಾರ್ಟ್ಸ್ ಕ್ಲಬ್ ಬ್ಯಾಂಡ್ " ಯುನೈಟೆಡ್ ಸ್ಟೇಟ್ಸ್‌ನಲ್ಲಿ #1 ಸ್ಥಾನಕ್ಕೆ ಏರಿತು ಮತ್ತು 15 ವಾರಗಳ ಕಾಲ ಅಲ್ಲಿಯೇ ಇರುತ್ತದೆ.

## ಎನ್ನ ಭಂಜಿ!!- 6

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ**

ಬಸ್‌ನಲ್ಲಿ ತುರ್ತು ನಿರ್ಗಮನ ಅಂತ ಬರೆದಿರುತ್ತಾರಲ್ಲ ಅಲ್ಲಿ ಒಬ್ಬ ಹದಿನಾರ್ಕೆಲಸದವ ಸುಮಾರು ಐವತ್ತು ವರ್ಷದವನಿರಬಹುದು, ಮುಲುಗುತ್ತ ಮುದುರಿಕೊಂಡು ಕುಳಿತಿದ್ದ. ಆತನ ಪಕ್ಕದಲ್ಲಿದ್ದ ಹೆಂಗಸು ಹೆಚ್ಚಿನಾಂಶ ಆತನ ಹೆಂಡತಿ ಇರಬಹುದು, ಅವರದೇ ಆದ ಮರಾಠಿ ಮಿಶ್ರಿತ ತೆಲುಗಿನಲ್ಲಿ ಎಡಬಿಡದೆ ವಟಗುಟ್ಟುತ್ತಾ ಯಾರಿಗೋ ಶಾಪ ಹಾಕುತ್ತಿದ್ದಳು. ಆಗಾಗ ಆ ಗಂಡಸು ಯಾರೋ ಅದೃಶ್ಯ ವ್ಯಕ್ತಿ ಸೂಜಿಯಲ್ಲಿ ಚುಚ್ಚುತ್ತಿರುವನೇನೋ ಎಂಬಂತೆ ಆ-ಊ, ಆಹಾಹ... ಎಂದು ನೋವಿನಿಂದ ಮುಲುಗುಟ್ಟುತ್ತಿದ್ದ. ಮುಖವಂತೂ ಅನ್ನ ತಿಂದು ಮೂರು ದಿವಸ ಆದಂತೆ ಇತ್ತು. ಮೂರು ಜನ ಕೂರುವಂತಿದ್ದ ಆ ಸೀಟಿನಲ್ಲಿದ್ದ ಮೂರನೆ ಜೀವಿಯೆಂದರೆ ಶಿಶುವಿಹಾರದ ಆಯಾ ಕಸ್ತೂರಮ್ಮ. ಪಕ್ಕದ ಹೆಂಗಸಿನ ಕೊನೆಮೊದಲಿಲ್ಲದ ಲೊಳಲಾಟವನ್ನು ನೋಡಿ ''ನಿನ್ ಬಾಯಿಗೆ ಯಾವಳೇ ಕೈ ಹಾಕಿದ್ದು? ನಾನೂ ಅಲ್ಲಿಂದಲೂ ನೋಡ್ತಿದ್ದೀನಿ, ಪುರುಸೊತ್ತಿಲ್ಲದೇ ಪಣ್‌ತಿದೀಯಾ'' ಎಂದ ಕೂಡಲೇ, ಕಿಟಕಿ ಪಕ್ಕದಲ್ಲಿ ನೋವಿನಿಂದ ನರಳ್ತಾ ಮುಲುಗಾಡುತ್ತಿದ್ದವ ಪಕ್ಕ ಕುಳಿತಿರುವ ಹೆಂಡತಿಯೆಂಬ ಹೆಂಗಸಿನ ಮೇಲೆ ಇದ್ದಕ್ಕಿದ್ದಂತೆ ಹರಿಹಾಯ್ದು 'ಏಯ್ ಇನ್ನೊಂದು ಮಾತು ಆಡಿದ್ರೂ ನಿನ್ನನ್ನು ಇಲ್ಲಿ ಎಲ್ಲರೆದ್ರು ಸೀರೆ ಬಿಚ್ಚಿ ಬಸ್ಸಾಚೆಗೆ ನೂಕಿ ಬಿಡ್ತೀನಿ. ಎಲ್ಲಾ ನಿನ್ನಿಂದಾನೇ ಆಗಿದ್ದು. ಆ ಮನ್ಷ ಎಂಥಾವ್ನು ಅಂತ ಗೊತ್ತಿದ್ರೂ ನನ್ನನ್ನು ಪೋಲಿಸರಿಗೆ ಸಿಗೋ ಹಂಗೆ ಮಾಡಿಬಿಟ್ಟೆಯಲ್ಲಾ. ಅಮ್ಮಾರೇ ಅಯ್ಯೋ ಎಂಥಾ ಹೇಳ್ಲಿ ನನ್ ಕಥೆನಾ, ಈ ಹೆಂಗಸಿನ ದೆಸೆಯಿಂದ ನನ್ ಪ್ರಾಣಾನೇ ಹೋಗ್ತಿತ್ತು. ನೋಡಿ ಹೆಂಗ್ ಕೂತಿದ್ದಾಳೆ ಮೂದೇವಿ.'

ಕಸ್ತೂರಮ್ಮನಿಗೆ ಕೆಲ ಬೈಗುಳಗಳನ್ನು ಬಿಟ್ಟರೆ ಬೇರೆ ಯಾವ ಮಾತುಗಳ ತಲೆಬುಡವೂ ತಿಳಿಯಲಿಲ್ಲ. ಪಕ್ಕದ ಹೆಂಗಸನ್ನು 'ಏನೇ? ಏನ್ ಸಮಾಚಾರ?' ಎಂದು ಕೇಳಿದ ಕಸ್ತೂರಮ್ಮನಿಗೂ ಊರು ಸಿಗುವವರೆಗೂ ಮಾತನಾಡಲು ವಿಚಾರ ಬೇಕಾಗಿತ್ತು. ''ನಂಗೇನ್ ಗೊತ್ತು ಎಲ್ಲಾ ಈ ಗಂಡ್ಸನ್ನೇ ಕೇಳಿ, ಸೂರನ್ನ'' ಎಂದು ತನಗೂ ಅದಕ್ಕೂ ಸಂಬಂಧವಿಲ್ಲದಂತೆ ಸಿಡುಕಿನಿಂದ ಕೊರಳು ಕೊಂಕಿಸಿ ಬಸ್ಸಿನ ಕಿಟಕಿಯಾಚೆಗೆ ನೋಡುತ್ತಾ ಕುಳಿತಳು.

ಆ ಗಂಡಸು ಹೇಳಿದ ವೃತ್ತಾಂತದ ಸಾರಾಂಶ ಹೀಗಿತ್ತು. ಕಾಫಿ ಹಣ್ಣು ಕುಯ್ಲು ಸಮಯದಲ್ಲಿ ಇಲ್ಲಿನ ಕೂಲಿಯಾಳುಗಳು ಸಾಕಾಗದೇ ದಾವಣಗೆರೆ-ಬಳ್ಳಾರಿಯಿಂದ ಸಾವಿರಾರು ಜನ ಕೆಲಸಗಾರರು ಮಲೆನಾಡಿಗೆ ಬರುತ್ತಾರೆ. ಊಟಕ್ಕೆ ಜೋಳ ಮುಂತಾದನ್ನು ಅಲ್ಲಿಂದಲೇ ಹೊತ್ತುತರುವ ಕೂಲಿ ಜನರನ್ನು ಕರೆತರಲು ಒಬ್ಬ ಮೇಸ್ತ್ರಿ ಇರುತ್ತಾನೆ. ಆ ಮೇಸ್ತ್ರಿ ಬಳಿ ಕಾಫಿ ಬೆಳೆಗಾರರು ವ್ಯವಹಾರ ಕುದುರಿಸಿ ದಿನ ಸಂಬಳವನ್ನು ನಿಗದಿ ಮಾಡುತ್ತಾರೆ. ನನಗಿಷ್ಟು ಕೆಲಸಗಾರರು ಇಷ್ಟು ದಿನದ ಮಟ್ಟಿಗೆ ಬೇಕು, ಪ್ರತಿ ಜನಕ್ಕೆ ಮೇಸ್ತ್ರಿಗಿಷ್ಟು ಕಮಿಷನ್. ಕೂಲಿಯಾಳುಗಳ ಕುಟುಂಬಕ್ಕೆ ಈ ನಡುವೆ ತರಕಾರಿ, ಕೋಳಿ, ಶರಾಬು, ಮೀನಿಗೆ ಇಷ್ಟು ಮಾತ್ರ ಹಣ ವಾರಕ್ಕೊಮ್ಮೆ ನೀಡಬೇಕು. ಸಂಬಳದ ಹಣ ಪೂರ್ಣವಾಗಿ ಮೇಸ್ತ್ರಿ ಕೈಗೆ ತಲುಪಿ ಆತನು ಅದರಲ್ಲಿ ವಾಹನ ಖರ್ಚು, ದವಸಧಾನ್ಯ, ಕಮಿಷನ್ ಎಲ್ಲಾ ಮುರಿದುಕೊಂಡು ಊರಿಗೆ ವಾಪಾಸಾದಾಗ ಉಳಿದ ಹಣವನ್ನು ಆ ಕಾರ್ಮಿಕರಿಗೆ ಅವರವರ ಕೆಲಸಕ್ಕನುಗುಣವಾಗಿ ಹಂಚುತ್ತಾನೆ. ಹೀಗೆ ಕೂಲಿಕೆಲಸದ ಅನ್ವೇಷಣೆಯಲ್ಲಿ ದಾವಣಗೆರೆಯಿಂದ ಮೂಡಿಗೆರೆಗೆ ಬಂದ ಅಸಂಖ್ಯಾತ ಕುಟುಂಬಗಳಲ್ಲಿ ಈ ಕುಟುಂಬವೂ ಒಂದು.



ಹಾಗೆ ಕೆಲಸಕ್ಕೆ ಬರುವ ಕುಟುಂಬಗಳನ್ನು ತೋಟದ ಮಾಲೀಕರು ತೋಟದಲ್ಲಿರುವ ಲೈನ್‌ಗಳೆಂಬ ವಾಸ್ತವ್ಯಗಳಲ್ಲಿ ನೀರು-ಬೆಳಕು ಒದಗಿಸಿ ಇರಿಸಿರುತ್ತಾರೆ. ತನ್ನ ತೋಟದ ಕಾಫಿ-ಕುಯಿಲು, ಜಮಾಕ್ಷನ್, ಹೋಕು, ಅಗತೆ ಮುಂತಾದ ಕೆಲಸಗಳು ಮುಗಿಯುವವರೆಗೆ ಇರಿಸಿಕೊಂಡು ಮೇಸ್ತ್ರಿಯೊಂದಿಗೆ ಲೆಕ್ಕಾಚಾರ ಮುಗಿಸಿ ಕಳುಹಿಸುವುದು ವಾಡಿಕೆ.

ಈ ಬಸ್ಸಿನೊಳಗೆ ನೋವಿನಿಂದ ಮುಲುಗುತ್ತಿರುವ ಕಾರ್ಮಿಕನ ಹೆಸರು ಬಸವರಾಜು ಅಥವಾ ಬಸ್ರಾಜ. ಈತನ ಹೆಂಗಸು ಪಾರಿ ಅಥವಾ ಪಾರ್ವತಿ; ಸ್ನಾನಗೀನ ಮಾಡಿಕೊಂಡು ಸುಮಾರಾಗಿರೋ ಬಟ್ಟೆ ಹಾಕಿಕೊಂಡ್ರೆ ಕಾರಿನಲ್ಲಿ ಓಡಾಡೋ ಮಲೆನಾಡಿನ ಪ್ಲಾಂಟರ್‌ಗಳ ಹೆಂಗಸ್ರಿಗೇನೂ ರೂಪ, ಮೈಕಟ್ಟು, ವೈಯ್ಯಾರದಲ್ಲಿ ಯಾವ ರೀತಿಯೂ ಕಡಿಮೆಯಿರಲಿಲ್ಲ. ಅದಕ್ಕೆ ಸರಿಯಾಗಿ ಬಸ್ರಾಜ ನಮ್ಮೂರಿನ ಗೋಪಾಲನಿಗೇ ಸಿಗಬೇಕೇ? ಈ ಗೋಪಾಲ ಕೆಲಸಗಾರ್ತಿಯರ ಆಳ್ತನದ ಮೇಲೆ ಕೆಲಸ-ಕೂಲಿ ನಿಗದಿ ಮಾಡಿ ಪ್ಲಾಂಟರಿಕೆ ನಡೆಸುತ್ತಿದ್ದವನು. ಮೊದಲೇ ತಿರುತಿರುಗಿ ನೋಡುವಂತಿದ್ದ ಪಾರಿ ಶೋಕಿ ಮಾಡುವ ಖಯಾಲಿಯವಳಾಗಿದ್ದರಿಂದ ನೆಪ ಮಾತ್ರಕ್ಕೆ ಕೆಲಸಕ್ಕೆ ಹೋಗುತ್ತಿದ್ದಳು. ಸೊಗಸುಗಾರ ಗೋಪಾಲ ತನ್ನಲ್ಲಿದ್ದ ಯೆಝ್ಡಿ ಮೋಟಾರ್ ಬೈಕ್‌ನಲ್ಲಿ ಹಳೆಪಳೆಯ ಡವ್ವಗಳನ್ನು ಹುಡುಕುತ್ತಾ ಪೇಟೆತೋಟವನ್ನೆಲ್ಲಾ ರ್ರವಂಡ್ ಹೊಡೆಯುತಿದ್ದವನು ಈಗೀಗ ಕೂಲಿಯಾಳುಗಳ ಲೈನ್ ಬಳಿಗೆ ಗುಡುಗುಡು ಭರ್‌ಭರ್ರೆಂದು ವಿನಾ ಕಾರಣ ಸುತ್ತತೊಡಗಿದ. ಅಮಾಯಕ ಬಸ್ರಾಜ ತನ್ನ ಮೂರು ಮಕ್ಕಳೊಂದಿಗೆ ಮುದ್ದೆ, ರೊಟ್ಟಿ, ಹುರುಳಿಕಟ್ಟು ಹೀಗೆ ಸಿಕ್ಕಿದನ್ನು ತಿಂದುಕೊಂಡು ಮಧ್ಯಾಹ್ನ ಎರಡರವರೆಗೆ ಕಾಫಿ ಕೊಯ್ದು ಲೈನಿಗೆ ಬಂದವ ಉಸ್ಸಂತ ಬಿದ್ದುಕೊಂಡರೆ ಸಂಜೆ ಐದಕ್ಕೆ ಎದ್ದು ಜಾರಪ್ಪನ ಕಳ್ಳಭಟ್ಟಿ ಸಾರಾಯಿಗೆ ಮುಗಿಬೀಳುತ್ತಿದ್ದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248